# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 690 / 2013

ಪಿರ್ಯಾದುದಾರರು : ಕುದೂರು ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿಗಳು : ಗಂಗಾಧರ ಮತ್ತು ಇತರರು**

**ಚಾಸಾ :- 01 / ಪ್ರಾಸಾ :- 01**

| | |
|---|---|
| ಹೆಸರು | **ಎಸ್.ಹೆಚ್ ನಾಗರಾಜು** |
| ತಂದೆಯ / ಗಂಡನ ಹೆಸರು | **ಹನುಮಂತಪ್ಪ** |
| ವಯಸ್ಸು | **37** |
| ಉದ್ಯೋಗ | **ಚಾಲಕ** |
| ವಿಳಾಸ | **ಹೊಸದುರ್ಗ, ಚಿತ್ರದುರ್ಗ ಜಿಲ್ಲೆ** |

**ದಿನಾಂಕಃ 08-05-2019 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** :- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ದಿನಾಂಕಃ 05-06-2013 ರಂದು ಸಂಜೆ 5.15 ಗಂಟೆ ಸಮಯದಲ್ಲಿ ನನಗೆ ಸೇರಿದ ಇಂಡಿಕಾ ಕಾರ್ ನಂಬರ್ ಕೆಎ-05-ಎಎ-1945 ನಲ್ಲಿ ಹೊಸದುರ್ಗ ಕಾರ್ ಸ್ಟಾಂಡ್ ನಲ್ಲಿರುವಾಗ ಮಂಜು ಮತ್ತು ಪ್ರಭು ಎಂಬ ಇಬ್ಬರು ವ್ಯಕ್ತಿಗಳು ಸದರಿ ಸ್ಟಾಂಡ್‌ಗೆ ಬಂದು ನಾವು 4 ಜನ ಇದ್ದು, ಕುದೂರಿಗೆ ಹೋಗಬೇಕು ಅಲ್ಲಿ ನಮ್ಮ ಕಡೆಯವರಿಗೆ ಹುಷಾರಿಲ್ಲ, ಅವರನ್ನು ನೋಡಿಕೊಂಡು ಮತ್ತೆ ಹುಳಿಯಾರ್ ಬಳಿಯಿರುವ ನಂದಿಹಳ್ಳಿಗೆ ನಮ್ಮನ್ನು ವಾಪಸ್ಸು ತಂದು ಬಿಡಬೇಕೆಂದು ಹಾಗೂ ಕಿಲೋ ಮೀಟರ್ ಗೆ 6 ರೂಪಾಯಿ 50 ಪೈಸೆಯಂತೆ ಮಾತನಾಡಿಕೊಂಡು ಸ್ಟಾಂಡ್ ನಿಂದ ಇಬ್ಬರು ನನ್ನ ಕಾರಿನಲ್ಲಿ ಹತ್ತಿಕೊಂಡು ಮುಂದೆ ಸಾಗಿ ಹೊಸದುರ್ಗದ ಕ್ಯಾನರಾ

ಬ್ಯಾಂಕ್ ಬಳಿ ಇನ್ನಿಬ್ಬರಾದ ಶ್ರೀನಿವಾಸ ಮತ್ತು ಪಂಚಕ್ಷರಿ ಹತ್ತಿಸಿಕೊಂಡು ಹಿರಿಯೂರು ಮಾರ್ಗವಾಗಿ ಹೋಗುತ್ತಿರುವಾಗ ಹಿರಿಯೂರು ರಸ್ತೆಯಲ್ಲಿ ಕಾರಿಗೆ ಡಿಸೇಲ್ ಹಾಕಿಸಿಕೊಳ್ಳಲು ಅವರ ಬಳಿ 1,500/- ಪಡೆದುಕೊಂಡು ಕಾರಿಗೆ ಡಿಸೇಲ್ ಹಾಕಿಸಿಕೊಂಡು ಶಿರಾ ಮಾರ್ಗವಾಗಿ ತುಮಕೂರು, ತುಮಕೂರು ಡಾಬಸ್ ಪೇಟೆ ಮಾರ್ಗವಾಗಿ ಹೋಗುತ್ತಿದ್ದು, ದಾಬಸ್ ಪೇಟೆಯ ಒಂದು ರೆಸ್ಟೊರೇಂಟ್ ನಲ್ಲಿ 1 ರಿಂದ 4 ನೇ ಆರೋಪಿತರುಗಳು ಮದ್ಯಪಾನ ಹಾಗೂ ಊಟ ಮಾಡಿರುತ್ತಾರೆ. ನನಗೂ ಸಹ ಊಟ ಕೊಡಿಸಿರುತ್ತಾರೆ.

2. ದಾಬಸ್ ಪೇಟೆಯಿಂದ ಶಿವಗಂಗೆ ಮಾರ್ಗವಾಗಿ ಕುದೂರು ಕಡೆಗೆ ಹೋಗುತ್ತಿರುವಾಗ ಆರೋಪಿತರುಗಳು ದೊಳ್ಳೇನಹಳ್ಳಿ ಸಮೀಪ ಶ್ರೀಗಿರಿ ಪುರದಲ್ಲಿ ಬಲಕ್ಕೆ ಕಾರನ್ನು ತಿರುಗಿಸುವಂತೆ ಹೇಳಿದ್ದು, ಅದರಂತೆ ನಾನು ಬಲಗಡೆ ಮಣ್ಣಿನ ರಸ್ತೆಯಲ್ಲಿ ಸುಮಾರು 2 ಕಿ.ಮೀ. ಸಾಗಿದ್ದು, ಸದರಿ ಮಣ್ಣಿನ ರಸ್ತೆಯ ಎಡ ಮತ್ತು ಬಲಗಡೆ ನೀಲಗಿರಿ ತೋಪು ಮತ್ತು ಮಾವಿನ ತೋಪು ಇದ್ದು, ಸದರಿ ಸ್ಥಳದಲ್ಲಿ ಆರೋಪಿತರುಗಳು ಮೂತ್ರ ವಿಸರ್ಜನೆ ಮಾಡಬೇಕೆಂದು ಕಾರನ್ನು ನಿಲ್ಲಿಸುವಂತೆ ನನಗೆ ತಿಳಿಸಿದ್ದು, ರಾತ್ರಿ 9 ಗಂಟೆಯ ಸಮಯದಲ್ಲಿ ಇಬ್ಬರು ಆರೋಪಿತರುಗಳು ಮೂತ್ರ ವಿಸರ್ಜನೆ ಮಾಡಲು ಕೆಳಗೆ ಇಳಿದಿದ್ದು, ಮತ್ತೆ ಇನ್ನಿಬ್ಬರು ಆರೋಪಿತರುಗಳು ದೂಮಪಾನ ಮಾಡಬೇಕೆಂದು ಕೆಳಗೆ ಇಳಿದಿದ್ದು, ಇದ್ದಕ್ಕಿದ್ದ ಹಾಗೆ ಅವರುಗಳಲ್ಲಿ ಪ್ರಭು ಎನ್ನವ ವ್ಯಕ್ತಿ ನನಗೆ ಕಣ್ಣಿಗೆ ಮಣ್ಣನ್ನು ಎರೆಚಿದ್ದು, ಮಂಜು ಎನ್ನುವವರು ನನ್ನ ಕುತ್ತಿಗೆ ಪಟ್ಟಿ ಹಿಡಿದು ನನ್ನನ್ನು ಕಾರಿನಿಂದ ಹೊರಗಡೆ ಎಳೆದುಕೊಂಡು, ಪಂಚಕ್ಷರಿ ಮತ್ತು ಶ್ರೀನಿವಾಸ ಎಂಬ ವ್ಯಕ್ತಿಗಳು ಚಾಕು ತೋರಿಸಿ ನನ್ನ ಜುಟ್ಟನ್ನು ಹಿಡಿದು ಎಳೆದು ಹೊಡೆದು, ಹೆದರಿಸಿ ಬೆದರಿಸಿ ನನ್ನ ಬಳಿ ಇದ್ದಂತಹ ನೊಕಿಯಾ ಮತ್ತು ರೊಕಿಯಾ ಎಂಬ ಎರಡು ಮೊಬೈಲ್ ಗಳನ್ನು ಹಾಗೂ ನನ್ನ ಬಳಿ ಇದ್ದಂತಹ 600 ರೂಪಾಯಿ ನಗದು ನನ್ನಿಂದ ಕಸಿದುಕೊಂಡು ನನ್ನನ್ನು ಬೇಲಿಗೆ ತಳ್ಳಿ, ನನ್ನ ಕಾರನ್ನು ಶ್ರೀನಿವಾಸ ಎಂಬುವರು ರಿವರ್ಸ್ ತೆಗೆದುಕೊಂಡು ಕಾರಿನ ಸಮೇತ ನಾಲ್ಕು ಜನರು

ಪರಾರಿಯಾಗಿರುತ್ತಾರೆ.

3. ನಂತರ ಅಲ್ಲಿದ್ದಂತಹ ಒಂದು ಒಂಟಿ ಮನೆಗೆ ಹೋಗಿ ಸದರಿಯವರ ಸಹಕಾರದಿಂದ ಶ್ರೀಗಿರಿಪುರ ಗ್ರಾಮಕ್ಕೆ ಬಂದಿದ್ದು, ಅಲ್ಲಿ ಗ್ರಾಮಸ್ಥರ ನೆರವಿನಿಂದ 100 ಸಹಾಯವಾಣಿಗೆ ಕರೆ ಮಾಡಿದ್ದು, ನಂತರ ಅಲ್ಲಿನ ಗ್ರಾಮಸ್ಥರು ನನ್ನನ್ನು ಕುದೂರು ಠಾಣೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ನಾನು ಆರೋಪಿತರುಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ದಾಖಲಿಸಿರುತ್ತೇನೆ. ಕಾರಿನ ಬೆಲೆ ಆ ಸಮಯದಲ್ಲಿ ಸುಮಾರು 90,000/- ರಿಂದ 1,20,000/- ಬೆಲೆ ಬಾಳುವಂತಹ ಕಾರು ಆಗಿರುತ್ತದೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಾನೇ ಸ್ವತಃ ನನ್ನ ಕೈಯಿಂದ ಬರೆದಿರುತ್ತೇನೆಂದು ನುಡಿದಿದ್ದು, ಸದರಿ ದಾಖಲಾತಿ ದೂರು ಆಗಿದ್ದು, **ದೂರನ್ನು ನಿಪಿ-1** ಎಂದು, **ಸಾಕ್ಷಿಯ ಸಹಿಯನ್ನು ನಿಪಿ-1(ಎ)** ಎಂದು ಗುರುತಿಸಲಾಯಿತು. ತದ ನಂತರ ಮರು ದಿನ ಕೃತ್ಯ ನಡೆದ ಸ್ಥಳಕ್ಕೆ ಪೋಲಿಸರು ಭೇಟಿ ನೀಡಿದ್ದು, ಸದರಿ ಸ್ಥಳವನ್ನು ನಾನು ತೋರಿಸಿದ್ದು, ಪೋಲಿಸರು ನನ್ನ ಸಮಕ್ಷಮ ಬೆಳಿಗ್ಗೆ ಸಮಯದಲ್ಲಿ ಮಹಜರ್ ಕ್ರಮ ಅನುಸರಿಸಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಮಹಜರ್ ಆಗಿದ್ದು, **ಮಹಜರ್ ನ್ನು ನಿಪಿ-2** ಎಂದು, **ಸಾಕ್ಷಿಯ ಸಹಿಯನ್ನು ನಿಪಿ-2(ಎ)** ಎಂದು ಗುರುತಿಸಲಾಯಿತು.

4. ಆದಾದ 9 ದಿವಸಗಳ ನಂತರ ತಿಪಟೂರು ತಾಲ್ಲೂಕಿನ ನೊಣವಿನ ಕೆರೆ ಪೋಲಿಸ್ ಠಾಣೆಯಿಂದ ನಿಮಗೆ ಸೇರಿದ ಕಾರು ಮತ್ತು ಮೊಬೈಲ್ ದೊರಕಿರುತ್ತದೆಂದು ನನಗೆ ದೂರವಾಣಿ ಕರೆ ಬಂದಿದ್ದು, ನಾನು ಸದರಿ ಠಾಣೆಗೆ ಹೋಗಿ ನೋಡಲಾಗಿ ನನ್ನ ಕಾರಿನ ನಂಬರ್ ಪ್ಲೇಟ್‌ನ್ನು ಬದಲಾಯಿಸಿದ್ದು, ನಾನು

ಅಲ್ಲಿ ನನ್ನ ಕಾರು ಮತ್ತು ಮೊಬೈಲ್‌ಗಳನ್ನು ನೋಡಿ ಗುರುತಿಸಿರುತ್ತೇನೆ, ಸದರಿ ಠಾಣೆಯ ಪೋಲಿಸರು ನನಗೆ ನಿಮ್ಮ ಪ್ರಕರಣವನ್ನು ಕುದೂರು ಪೋಲಿಸ್ ಠಾಣೆಗೆ ವರ್ಗಾಯಿಸುತ್ತೇವೆ, ಅಲ್ಲಿ ನ್ಯಾಯಾಲಯದಲ್ಲಿ ಬಿಡಿಸಿಕೊಳ್ಳಿ ಎಂದು ತಿಳಿಸಿರುತ್ತಾರೆ. ಸದರಿ ಠಾಣೆಯಲ್ಲಿ ನನ್ನಿಂದ ಹಣ ಮತ್ತು ಮೊಬೈಲ್ ಹಾಗೂ ಕಾರನ್ನು ಕಸಿದುಕೊಂಡ ಪ್ರಭು ಮತ್ತು ಮಂಜು ಎನ್ನುವ ಇಬ್ಬರು ಆರೋಪಿತರುಗಳನ್ನು ತೋರಿಸಿದ್ದು, ಸದರಿಯವರನ್ನು ನಾನು ನೋಡಿ ಗುರುತಿಸಿರುತ್ತೇನೆ. ಪ್ರಭು ಎನ್ನುವ ವ್ಯಕ್ತಿಯ ಹೆಸರು ಗಂಗಾಧರ (1 ನೇ ಆರೋಪಿ) ಎಂದು ತಿಳಿದು ಬಂದಿರುತ್ತದೆ, ಸದರಿ ವ್ಯಕ್ತಿ ನನಗೆ ಘಟನೆ ನಡೆದ ದಿವಸ ಮಣ್ಣನ್ನು ಎರೆಚಿದ ವ್ಯಕ್ತಿಯಾಗಿರುತ್ತಾರೆ. ಪ್ರಭು ಎನ್ನುವ ವ್ಯಕ್ತಿಯ ಹೆಸರು ಗಂಗಾಧರ ಆಗಿದ್ದು, ಹೆಸರನ್ನು ಸುಳ್ಳು ಹೇಳಿ ನನಗೆ ವಂಚನೆ ಮಾಡಿರುತ್ತಾರೆ. ಇನ್ನೊಬ್ಬ ವ್ಯಕ್ತಿ ಮಂಜು ಎಂದು ನನ್ನ ಬಳಿ ಹೇಳಿಕೊಂಡಂತಹ ವ್ಯಕ್ತಿಯ ಮೂಲ ಹೆಸರು ಸಂಜು(4 ನೇ ಆರೋಪಿ) ಎಂದು ನನಗೆ ತಿಳಿದು ಬಂದಿರುತ್ತದೆ. ಪಂಚಕ್ಷರಿಯ ಹೆಸರು ಶ್ರೀಕಾಂತ್ (2 ನೇ ಆರೋಪಿ) ಎಂದು ತಿಳಿದುಬಂದಿರುತ್ತದೆ. ಇನ್ನೊಬ್ಬ ವ್ಯಕ್ತಿ ಶ್ರೀನಿವಾಸ ಎಂದು ನನ್ನ ಬಳಿ ಹೇಳಿಕೊಂಡಂತಹ ವ್ಯಕ್ತಿಯ ಮೂಲ ಹೆಸರು ಚಂದ್ರು(3 ನೇ ಆರೋಪಿ) ಎಂದು ನನಗೆ ತಿಳಿದು ಬಂದಿರುತ್ತದೆ.

5. ತಿಪಟೂರು ತಾಲ್ಲೂಕಿನ ನೊಣವಿನ ಕೆರೆ ಪೋಲಿಸ್ ಠಾಣೆಯಲ್ಲಿ ನಾನು 2 ನೇ ಆರೋಪಿ ಶ್ರೀಕಾಂತ್ (ಪಂಚಕ್ಷರಿ) ಮತ್ತು 3 ನೇ ಆರೋಪಿಯಾದ ಚಂದ್ರ (ಶ್ರೀನಿವಾಸ್), 1 ನೇ ಆರೋಪಿ ಪ್ರಭು (ಗಂಗಾಧರ) ಆರೋಪಿತರುಗಳನ್ನು ನೋಡಿ ಗುರುತಿಸಿದ್ದು, ಮಂಜು ( ಸಂಜಯ್) ತಲೆ ಮರೆಸಿಕೊಂಡಿರುತ್ತಾರೆಂದು ತಿಳಿದುಬಂದಿರುತ್ತದೆ. ತಿಪಟೂರು ತಾಲ್ಲೂಕಿನ ನೊಣವಿನ ಕೆರೆ ಪೋಲಿಸ್ ಠಾಣೆಯಲ್ಲಿ ಮಾಲುಗಳನ್ನು ಹಾಗೂ ಆರೋಪಿತರುಗಳನ್ನು ನೋಡಿ ಗುರುತಿಸಿದ ಬಗ್ಗೆ ಕುದೂರು ಪೋಲಿಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ನನ್ನನ್ನು ಹೆದರಿಸಿ ಕಿತ್ತುಕೊಂಡು ಹೋಗಿದ್ದಂತಹ 600 ನಗದು ಹಣವನ್ನು ಆರೋಪಿತರುಗಳು ಖರ್ಚು

ಮಾಡಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ. ನನ್ನನ್ನು ಹೆದರಿಸಿ ನನ್ನಿಂದ ಸುಲಿಗೆ ಮಾಡಿದ್ದಂತಹ ಇಂಡಿಕಾ ಕಾರ್ ನಂಬರ್ ಕೆಎ-05-ಎಎ-1945 ಮತ್ತು ನೊಕಿಯಾ ಮತ್ತು ರೊಕಿಯಾ ಮೊಬೈಲ್ ಗಳನ್ನು ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ನನ್ನ ವಶಕ್ಕೆ ಪಡೆದುಕೊಂಡಿದ್ದು, ಅವುಗಳನ್ನು ಈ ದಿವಸ ನ್ಯಾಯಾಲಯಕ್ಕೆ ಮೊಬೈಲ್ ಮತ್ತು ರೊಕಿಯಾ ಮೊಬೈಲ್ ಹಾಜರು ಪಡಿಸಿದ್ದು, **ಕಪ್ಪು ಬಣ್ಣದ ನೊಕಿಯಾ ಮೊಬೈಲ್ ನ್ನು ಎಂ.ಓ-1** ಎಂದು ಹಾಗೂ **ಬಿಳಿ ಬಣ್ಣದ ರೊಕಿಯಾ ಮೊಬೈಲ್ ನ್ನು ಎಂ.ಓ-2** ಎಂದು ಗುರುತಿಸಲಾಯಿತು. ನನಗೆ ಸೇರಿದ ಇಂಡಿಕಾ ಕಾರ್ ನಂಬರ್ ಕೆಎ-05-ಎಎ-1945 ಈಗ ಸುಸ್ಥಿತಿಯಲ್ಲಿರದೇ ಇರುವ ಕಾರಣ ಹಾಗೂ ನಾನು ವಾಸಿಸುವಂತಹ ಸ್ಥಳದಿಂದ ಇಲ್ಲಿಗೆ ತರಲು ಹೆಚ್ಚಿನ ವೆಚ್ಚವಾಗುವ ಕಾರಣ, ಅದನ್ನು ಭರಿಸುವ ಆರ್ಥಿಕ ಸಾಮರ್ಥ್ಯ ಇಲ್ಲದೇ ಇರುವ ಕಾರಣ ಸದರಿ ವಾಹನವನ್ನು ಈ ದಿವಸ ನ್ಯಾಯಾಲಯಕ್ಕೆ ಸಾಧ್ಯವಾಗದೇ ಇರುವ ಕಾರಣ, ಸದರಿ ವಾಹನಕ್ಕೆ ಸಂಬಂಧಿಸಿದಂತೆ ಹಾಗೂ ಎಂ.ಓ-1 ಮತ್ತು 2 ಕ್ಕೆ ಸಂಬಂಧಿಸಿದಂತೆ, 4 ಪೋಟೋಗಳನ್ನು ಹಾಗೂ ಒಂದು ಸಿ.ಡಿ. ಯನ್ನು ಈ ದಿವಸ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ( ಎಂ.ಓ-1 ಮತ್ತು 2 ನ್ನು ನ್ಯಾಯಾಲಯ ಖುದ್ದು ಪರಿಶೀಲಿಸಿ ಅದರ ಪೋಟೋಗಳನ್ನು ಪಡೆದು ತಾಳೆ ಮಾಡಿ ನೋಡಿ ಮೂಲ ಎಂ.ಓ-1 ಮತ್ತು 2 ನ್ನು ಪಿರ್ಯಾದುದಾರರಿಗೆ ಹಿಂದುರುಗಿಸಲಾಗಿರುತ್ತದೆ ). **ಇಂಡಿಕಾ ಕಾರ್ ನಂಬರ್ ಕೆಎ-05-ಎಎ-1945 ಮೂರು ಪೋಟೋಗಳನ್ನು** ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು **ನಿಪಿ-3 ರಿಂದ 5** ಎಂದು, **ಎಂ.ಓ-1 ಮತ್ತು 2 ಕ್ಕೆ** ಸಂಬಂಧಿಸಿದಂತೆ **1 ಪೋಟೋವನ್ನು** ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ-6** ಎಂದು, **ನಿಪಿ-3 ರಿಂದ 6 ರ ಪೋಟೋಗಳಿಗೆ** ಸಂಬಂಧಿಸಿದಂತೆ **ಒಂದು ಸಿ.ಡಿ. ಯನ್ನು ನಿಪಿ-7** ಎಂದು ಗುರುತಿಸಲಾಯಿತು. 1, 2 ಮತ್ತು 4 ನೇ ಆರೋಪಿತರುಗಳು ಈ ಪ್ರಕರಣದಿಂದ ಪ್ರತ್ಯೇಕಿಸಲಾಗಿರುತ್ತದೆ, ಸಾಕ್ಷಿ ಅವರುಗಳನ್ನು ನೋಡಿದ್ದಲ್ಲಿ ಗುರುತಿಸುತ್ತೇನೆಂದು ನುಡಿಯುತ್ತಾರೆ. ಈ ದಿನ ಮಾನ್ಯ ನ್ಯಾಯಾಲಯದಲ್ಲಿ 3 ನೇ ಆರೋಪಿ ಗೈರು ಹಾಜರಾಗಿದ್ದು, 3 ನೇ ಆರೋಪಿ ಗೈರು ಹಾಜರಾಗಿರುವ ಕಾರಣ 3 ನೇ ಆರೋಪಿ ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆಗಾಗಿ

ಮುಂದೂಡಲಾಗಿರುತ್ತದೆ.

ಈ ಹಂತದಲ್ಲಿ 3 ನೇ ಆರೋಪಿಯನ್ನು ಗುರುತಿಸುವ ಸಲುವಾಗಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು.

ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,

ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.